೭) ವಿವಿಧ ಕಾಲೇಜುಗಳಲ್ಲಿ ಸರ್ಕಾರಿ ಆಜ್ಞೆ ಪ್ರಕಾರ ಹಿಂದುಳಿದ ಜನಾಂಗಗಳಿಗೆ ಕಾಯ್ದಿರಿಸಿದ ಸೀಟುಗಳನ್ನು ನೀಡದಿರುವುದು.

ಶ್ರೀ ಕೆ. ಕಂಠಾಲ —ಇಡಿಎನ್. ೫೪ ಪಿಟಿಎಲ್. ೭೭ ದಿನಾಂಕ ೧೮-೫-೮೭ ಶಿಕ್ಷಣ ಇಲಾಖೆ ದಿನಾಂಕ ೧-೬-೮೭ರಂತೆ ಸರ್ಕಾರಿ ಆದೇಶವಿದ್ದರೂ ಖಾಸಗಿ ಕಿರಿಯ ಕಾಲೇಜು ಪ್ರಥಮ ದರ್ಜೆ ಕಾಲೇಜು ಗಳಲ್ಲಿ ಪಿಯ್ಯುಡ್ ಕಾಲೇಜುಗಳಲ್ಲಿ. ಪಾಲಿಟೆಕ್ನಿಕ್, ಐ.ಟಿ.ಐ ಸಂಸ್ಥೆಗಳಲ್ಲಿ ವಿವಿಧ ಪರಿಷದ ಜನಾಂಗ ದವರಿಗೆ ಶೇಕಡಾವಾರು ದಾಖಲಾತಿ ಸೀಟುಗಳನ್ನು ನೀಡುವಂತಾಗಬೇಕು ಎಂದು ಸರ್ಕಾರದ ನಿರ್ದೇಶನವಿದೆ. ಪರಿಶಿಷ್ಟ ಜಾತಿಯವರಿಗೆ ಶೇಕಡಾ ೧೫, ಪರಿಶಿಷ್ಟ ಪಂಗಡಕ್ಕೆ ಶೇಕಡಾ ೩, ಹಿಂದುಳಿದ ವರ್ಗದವರಿಗೆ ಶೇಕಡಾ ೧೮, ಬಿ.ಸಿ.ಟಿ.ಗೆ ಶೇಕಡಾ ೧೦, ಬಿ.ಟಿ.ಗೆ ಶೇಕಡಾ ೫. ಹಿಂದುಳಿದ ವಿಶೇಷ ಗ್ರೂಪ್‌ಗೆ ಶೇಕಡಾ ೫, ಸಾಮಾನ್ಯ ವರ್ಗಕ್ಕೆ ಶೇಕಡಾ ೪೪ ಈ ರೀತಿ ಇದೆ. ಈ ಮೇಲಿನ ಆದೇಶದಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವುದೇ ಕಿರಿಯ, ಹಿರಿಯ ಕಾಲೇಜು, ಪಿಯ್ಯುಡ್ ಕಾಲೇಜುಗಳು, ಪಾಲಿಟೆಕ್ನಿಕ್, ಐ.ಟಿ.ಐ ಸಂಸ್ಥೆಗಳು ಪಾಲಿಸುತ್ತಿಲ್ಲ. ಉದಾಹರಣೆಗೆ ಮಂಗಳೂರು ಕೆನರಾ ಜೂನಿಯರ್ ಕಾಲೇಜು- ಈ ಕಾಲೇಜು ಮೇಲಿನ ಸರಕಾರೀ ಆದೇಶವನ್ನು ಲೆಕ್ಕಿಸುತ್ತಿಲ್ಲ-ಲೆಕ್ಕಿಸಲಾಗುವುದಿಲ್ಲ ಎಂದು ಹೇಳುತ್ತಿರುವುದು ತಿಳಿದು ಬರುತ್ತದೆ. ಆದುದರಿಂದ ಸರಕಾರಿ ಆದೇಶವನ್ನು ಖಾಸಗಿ ಸಂಸ್ಥೆಗಳು ಪಾಲಿಸಿ ಬಡ ವಿದ್ಯಾರ್ಥಿಗಳು ವಿದ್ಯೆಯನ್ನು ಪಡೆಯಲು ತಕ್ಷಣ ನ್ಯಾಯ ದೊರಕಿಸಿ ಕೊಡುವಂತೆ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ ಆಳ್ವ.—ಖಾಸಗೀ ಕಾಲೇಜುಗಳಲ್ಲಿ ಸರ್ಕಾರದ ವಿಶೇಷಲಾತಿ ಆದೇಶದಂತೆ ಸೀಟು ಗಳನ್ನು ಹಂಚಿಲ್ಲವೆಂದು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ನಾನು ಪರಿಶೀಲನೆ ಮಾಡಿಸುತ್ತೇನೆ.

೮) ರೈತರಿಗೆ ಬಡ್ಡಿ ರಿಯಾಯಿತಿಯ ಸಾಲದ ಮರುಪಾವತಿ ಅವಧಿಯನ್ನು ವಿಸ್ತರಿಸುವುದರ ಬಗ್ಗೆ

SRI R. VENKATARAMAIAH.—Sir, the Government had agreed to extend the benefit of interest waiver upto the end of June 1988. But they have agreed to extend it upto 30th April. The poor agriculturists who are unable to pay interest and principal are under the impression that this benefit will be extended upto 30th June 1988, which would help lakhs of agriculturists who are hoping that there will be extension as promised early. I request the Hon'ble Minister for Co-operation to give extension upto June, 1988.

ಶ್ರೀ ಎಚ್. ವಿಶ್ವನಾಥಯ್ಯ - ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಬಡ್ಡಿರಿಯಾಯಿತಿ ಬಗ್ಗೆ ಸರ್ಕಾರ ಏನು ಆದೇಶ ಹೊರಡಿಸಿದೆ, ಅದರ ಪ್ರಕಾರ ೩೦-೪-೧೯೮೮ರವರೆಗೆ ರಿಯಾಯಿತಿಯನ್ನು ಕೊಟ್ಟಿದ್ದೇವೆ. ಅದಕ್ಕೆ ಮುಂಚೆ ಎಂದರೆ ೩೦-೬-೧೯೮೮ರವರೆಗೆ ಎಸ್ತರಿಸಲು ಸರ್ಕಾರ ಬಯಸುವುದಿಲ್ಲ. ಈಗಾಗಲೇ ಸ್ಪಷ್ಟವಾಗಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ.

೯) ಗುಳೇದಗುಡ್ಡದಲ್ಲಿ ಪ್ರಾಥಮಿಕ ಶಾಲಾ ಕಟ್ಟಡದ ಕೆಲಸ ಇನ್ನೂ ಪ್ರಾರಂಭಿಸದಿರುವುದು.

ಶ್ರೀ ಎಸ್.ಜಿ.ನಂಜಯ್ಯನಮಠ್.—ಬಿಜಾಪುರ ಜಿಲ್ಲೆಯ ಗುಳೇದಗುಡ್ಡದಲ್ಲಿ ಪ್ರಾಥಮಿಕ ಶಾಲೆಯ ಕಟ್ಟಡವು ೧೯೮೬-೮೭ರಲ್ಲಿ ಮಂಜೂರಾಗಿದ್ದು ಇಲ್ಲಿಯವರೆಗೆ ಕಟ್ಟಡ ಪ್ರಾರಂಭವಾಗಿರುವುದಿಲ್ಲ. ಕೇವಲ ಅಡಿಪಾಯವನ್ನು ಒಂದು ವರ್ಷದ ಹಿಂದೆ ಹಾಕಿ ಹಾಗೆಯೇ ಬಿಡಲಾಗಿದೆ ಈ ಬಗ್ಗೆ ಸಾಕಷ್ಟು ಬಾರಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಬೆಳಗಾವಿ ವೃತ್ತ ಮತ್ತು ಎಕ್ಸಿಕ್ಯೂಟೀವ್ ಇಂಜಿನಿಯರ್ ಬಾಗಲಕೋಟೆ ಇವರಿಗೆ ಹತ್ತಾರು ಬಾರಿ ಪತ್ರ ಮುಖೇನವಾಗಿ ತಿಳಿಸಿದರೂ ಯಾವುದೇ ಕ್ರಮವಿಲ್ಲ.

ಶಾಲೆಯ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸತ್ಯಾಗ್ರಹ ಪ್ರಾರಂಭ ಮಾಡುವುದಾಗಿ ತಿಳಿಸಿದರೂ ಇನ್ನೂ ಯಾವುದೇ ಕ್ರಮವಿಲ್ಲ. ಕಂಟ್ರಾಕ್ಟರ್‌ಗೆ ಕೊಟ್ಟಿದ್ದ ಅವಧಿ ಮುಗಿದಿದ್ದರೂ ಬದಲಿಸಿರುವುದಿಲ್ಲ. ಈ ಬಗ್ಗೆ ಸರ್ಕಾರ ತೀವ್ರವಾದ ಕ್ರಮ ಕೈಗೊಳ್ಳುವುದೆ?

ಶ್ರೀ ಬಿ. ಸೋಮಶೇಖರ್.—ಮಾನ್ಯ ಸದಸ್ಯರಾದ ಶ್ರೀ ನಂಜಯ್ಯನಮಠ್ ಅವರ ಹೇಳಿರತಕ್ಕಂಥ ಶಾಲಾ ಕಟ್ಟಡದ ವ್ಯಾಪ್ತಿ ಜಿಲ್ಲಾಪರಿಷತ್ತಿಗೆ ಬರುತ್ತದೆ. ಆದರೂ ಸಹಿತ ಅದು ಯಾವ ಹಂತದಲ್ಲಿದೆ ಎಂದು ತಿಳಿದು ಆದಷ್ಟು ಬೇಗ ಪೂರ್ಣಗೊಳಿಸಬೇಕೆಂದು ನಿರ್ದೇಶನವನ್ನು ನೀಡುತ್ತೇನೆ.

೧೦) ಪುತ್ತೂರು ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗೆ ಸ್ಮೃತಿ ತಪ್ಪಿಸುವ ವೈದ್ಯಾಧಿಕಾರಿಯನ್ನು ನೇಮಿಸದಿರುವುದು.

ಶ್ರೀ ವಿನಯಕುಮಾರ್ ಸೊರಕೆ .—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ, ನೆರೆಹೊರೆಯ ಸುಳ್ಯ, ಕಡಬ, ಬೆಳ್ತಂಗಡಿ, ವಿಟ್ಲ ಮತ್ತು ಪುತ್ತೂರು ತಾಲ್ಲೂಕಿನಾದ್ಯಂತ ರೋಗಿಗಳು ಬರುತ್ತಿದ್ದು, ಇಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕಳೆದ ನೂರು ವರ್ಷದಿಂದ ಇದ್ದಂತಹ ಆಸ್ಪತ್ರೆಯಾಗಿದ್ದು, ಇಲ್ಲಿಯ ವ್ಯವಸ್ಥೆ ಮಟ್ಟಿಗೆ ಕೆಲವೋದು ಲೋಷದೋಷಗಳನ್ನು ಸರ್ಕಾರದ ಗಮನಕ್ಕೆ ಹಾಗೂ ಇಲಾಖೆಯ ಗಮನಕ್ಕೆ ತಂದರೂ ಸಹ ಯಾವುದೇ ರೀತಿಯ ಪರಿಹಾರ ಸಿಗದೇ ಇರುವುದರಿಂದ ಅಲ್ಲಿ ಕೆಲಸ ಮಾಡುವ ವೈದ್ಯಾಧಿಕಾರಿಗಳಿಗೆ ತುಂಬಾ ತೊಂದರೆಯಾಗಿದೆ. ಇಲ್ಲಿ ಬಂದಂತಹ ರೋಗಿಗಳಲ್ಲಿ ಆಪರೇಷನ್ ಕೇಸ್ ಇದ್ದರೆ, ಅಲ್ಲಿ ಆಪರೇಷನ್ ಗೋಸ್ಕರ ಸ್ಮೃತಿ ತಪ್ಪಿಸುವ ವೈದ್ಯಾಧಿಕಾರಿ ಇಲ್ಲದೆ ಇರುವುದರಿಂದ, ಆಪರೇಷನ್ ಮಾಡುವ ಅವಕಾಶ ಇರುವುದಿಲ್ಲ. ಇಲ್ಲಿ ಆಪರೇಷನ್ ಮಾಡದೇ ಇದ್ದರೆ ಅಂತಹ ಕೇಸನ್ನು ಮಂಗಳೂರಿಗೆ ಕೊಂಡು ಹೋಗಬೇಕಾಗುತ್ತೆ. ಹೆಚ್ಚಿನ ರೋಗಿಗಳು ಮಂಗಳೂರಿಗೆ ಹೋಗಿ ಚಿಕಿತ್ಸೆ ಪಡೆಯುವಂತಹ ಆರ್ಥಿಕ ಶಕ್ತಿ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ತುಂಬಾ ಹಿಂದಿನಿಂದಲೂ ಹೊರಗಡೆಯ ನುರಿತ ವೈದ್ಯಾಧಿಕಾರಿಗಳನ್ನು ಇಲ್ಲಿಗೆ ತರಿಸಿ ಸ್ಮೃತಿ ತಪ್ಪಿಸುವುದನ್ನು ಮಾಡುವುದು ಹಿಂದಿನಿಂದಲೂ ನಡೆದುಬಂದ ಪದ್ಧತಿ. ಆದರೆ ಇದರ ಬಗ್ಗೆ ಕೆಲವೊಂದು ಕಂತಂತ್ರಿಗಳು ಈ ವ್ಯವಸೆ ಯನ್ನೂ ಹಾಳು ಮಾಡಬೇಕು, ಆಸ್ಪತ್ರೆಗೆ ಕೆಟ್ಟ ಹೆಸರು ತರಬೇಕು ಎಂದು ಪ್ರಯತ್ನ ನಡೆಸುತ್ತಿದ್ದಾರೆ. ಇದರ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳು ಕೂಡಲೇ ಪುತ್ತೂರು ಸರ್ಕಾರಿ ಆಸ್ಪತ್ರೆಗೆ ಒಬ್ಬ ಆಪರೇಷನ್‌ಗೋಸ್ಕರ ಸ್ಮೃತಿ ತಪ್ಪಿಸುವ ವೈದ್ಯಾಧಿಕಾರಿಯನ್ನು ಕೂಡಲೇ ನೇಮಿಸುವುದು ಕಾಗೂ ಆಸ್ಪತ್ರೆಗೆ ಬೇಕಾಗುವ ಕೆಲವೊಂದು ಹುದ್ದೆಗಳ ಆವಶ್ಯಕತೆಗಳ ಬಗ್ಗೆ ಹಾಗೂ ಈ ನೆರೆಯ ತಾಲ್ಲೂಕುಗಳ ಸಾರ್ವಜನಿಕರ ಬೇಡಿಕೆ ಏನು ಎಂದರೆ ಕಳೆದ ಕೆಲವು ವರ್ಷಗಳ ಹಿಂದಿನಿಂದ ಇದೆ, ನೂರು ಬೆಡ್‌ಗಳ ಆಸ್ಪತ್ರೆಯಾಗಬೇಕು ಎಂಬುದನ್ನು ಮಾನ್ಯ ಮಂತ್ರಿಗಳು ಈಡೇರಿಸಿ ಕೊಡಬೇಕಾಗಿ ತಮ್ಮ ಮುಖಾಂತರ ಒತ್ತಾಯಪಡಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ಪುತ್ತೂರು ಆಸ್ಪತ್ರೆಗೆ ಬೇಕಾಗಿರತಕ್ಕಂಥ ವೈದ್ಯಾಧಿಕಾರಿಗಳನ್ನು ಕೊಡಲಾಗಿದೆ. ಇನ್ನು ತಾಲ್ಲೂಕುಗಳಲ್ಲಿ ಇರತಕ್ಕ ಆಸ್ಪತ್ರೆಗಳಲ್ಲಿ ೫೦ ಬೆಡ್ ಇರತಕ್ಕ ವ್ಯವಸ್ಥೆ ಮಾಡಿದ್ದೇವೆ, ಇದನ್ನು ನೂರು ಬೆಡ್‌ಗಳ ಆಸ್ಪತ್ರೆಯನ್ನಾಗಿ ಮಾಡಲು, ಹಂತ ಹಂತವಾಗಿ ಹಾಗೂ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ೧೦೦ ಹಾಸಿಗೆ ಇರತಕ್ಕ ವ್ಯವಸ್ಥೆಗೆ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆ.

೧೧) ಶಿವಮೊಗ್ಗ ಜಿಲ್ಲೆಯಲ್ಲಿ ಬಿತ್ತನೆಯ ಬೀಜಗಳಿಂ ದೊರಕದೆ ತೊಂದರೆಯಾಗಿರುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಕೆಲವು ಭಾಗದಲ್ಲಿ ೨-೩ ಬಾರಿ ಮಳೆ ಬಿದ್ದಿದ್ದು ವಿಶೇಷವಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಇನ್ನು ೫-೬ ದಿವಸದೊಳಗೆ ಬಿತ್ತನೆ ಕೆಲಸ ಪ್ರಾರಂಭಿಸುವವರಿದ್ದು, ಕೃಷಿ ಇಲಾಖೆಯಲ್ಲಿ ಬಿತ್ತನೆಗೆ ಬೇಕಾದ ಹತ್ತಿಬೀಜ, ಜವಾರ್, ಸೂರ್ಯಕಾಂತಿ ಅಗತ್ಯಕ್ಕೆ ಬೇಕಾದಷ್ಟು ಇಲ್ಲದೆ, ವಿಶೇಷವಾಗಿ ಹತ್ತಿಬೀಜ ಸಿಗುತ್ತಿಲ್ಲ. ಈವರೆಗೆ ವಿತರಣೆ ಕೆಲಸ